**ಸಾಕ್ಷಿಯನ್ನು ದಿಃ 14.11.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ವಾಯ್. ಹೆಚ್. ಆರ್.ವಕೀಲರಿಂದ.**

ಮರುತ್ತರಕ್ಕೆ ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. ವಾದಿ ನನಗೆ ನೀಡಿದ ನೋಟಿಸ್ ಅನ್ನು ನಾನು ಓದಿರುತ್ತೇನೆ. ಸದರಿ ನೋಟಿಸನ ಪ್ಯಾರಾ 2 ರಲ್ಲಿ ಕಾವೇರಿ ಗ್ರಾಮೀಣ ಬ್ಯಾಂಕ್ ನಿಡಸಾಲೆ ಮತ್ತು ಎಸ್.ಬಿ.ಎಂ ಹು.ದುರ್ಗ ದಲ್ಲೂ ಮಾಡಿರುವ ಸಾಲವನ್ನು ತಿರುವಳಿ ಮಾಡಿ ಕ್ರಯ ಪತ್ರ ಬರೆದುಕೊಡುವುದಾಗಿ ಹೇಳಿದ ಬಗ್ಗೆ ನಮೂದು ಇದೆ ಎಂದರೆ ಸರಿಯಲ್ಲ. ಕಾಲಂ ನಂ 11 ರಲ್ಲಿ ಇರುವ ಸಾಲವನ್ನು ನಾಲ್ಕು ತಿಂಗಳೊಳಗಾಗಿ ತಿರುವಳಿ ಮಾಡಿ ನಂತ ಕ್ರಯ ಪತ್ರ ಮಾಡಿಕೊಡುವುದಾಗಿ ಹೇಳಿದ್ದೇವು ಎಂದರೆ ಸರಿಯಲ್ಲ.

ನಮ್ಮ ಕುಟುಂಬದ ಜಮೀನುಗಳ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತೇನೆ. ನಮಗೆ ದಾವಾ ಸ್ವತ್ತು ಮತ್ತು ಇನ್ನೊಂದು ನನ್ನ ತಾಯಿಯ ಹೆಸರಿಗೆ ಇರುವ ಸ್ವತ್ತು ಇದೆ ಎಂದು ಹೇಳುತ್ತಾರೆ. ನನ್ನ ತಾಯಿಯ ಹೆಸರಿಗೆ ಇರುವ ಜಮೀನು 1 ವರೆ ಎಕರೆ ಇರುತ್ತದೆ ಎಂದು ಹೇಳುತ್ತಾರೆ. ನಾವು 3 ಜನ ಅಣ್ಣತಮ್ಮಂದಿರು ಇದ್ದು ವ್ಯವಹಾರ ಮಾಡುತ್ತೇವೆ. ಪ್ರತಿವಾದಿ ಪತ್ರಕ್ಕೆ ಮಾಹಿತಿ ನಾನೇ ನೀಡಿರುತ್ತೇನೆ. ದಾವಾ ಸ್ವತ್ತು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತಾಗಿದ್ದು ಅವರು ನ್ಯಾಯಾಲಯಕ್ಕೆ ಬಂದಲ್ಲಿ ಸತ್ಯ ಗೊತ್ತಾಗುತ್ತದೆ ಎಂದು ಅವರನ್ನು ನ್ಯಾಯಾಲಯಕ್ಕೆ ಕರೆತಂದಿಲ್ಲ ಮತ್ತು ವಕೀಲರ ಕಚೇರಿಗೆ ಕರೆದುಕೊಂಡು ಹೋಗಿಲ್ಲವೆಂದರೆ ಸರಿಯಲ್ಲ.

ನನ್ನ ತಾಯಿ ಖರೀದಿ ಮಾಡಿದ ಸ್ವತ್ತುಗಳ ಕ್ರಯ ಪತ್ರ ನಾನು ಓದಿರುತ್ತೇನೆ. ಕ್ರಯ ಪತ್ರದಲ್ಲಿ ಒಟ್ಟು ಕುಟುಂಬದ ಆದಾಯದಿಂದ ಬಂದ ಹಣದಿಂದ ಖರೀದಿ ಮಾಡಿದ್ದೇವೆಂದು ಹೇಳಿದ ಬಗ್ಗೆ ನನಗೆ ನೆನಪಿಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ವಾದಿ ಕೈಸಾಲ ಇತರರಿಗೂ ಸಹ ನೀಡಿದ ಬಗ್ಗೆ ಹೇಳಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಕಡೆಯಿಂದ ಸಾಲ ಅವಶ್ಯಕತೆ ಇದೆ ಎಂದು ಸಾಲ ನೀಡುವಂತೆ ನಮ್ಮ ಕುಟುಂಬದಲ್ಲಿ ನಾನು

ಮತ್ತು ಪ್ರತಿವಾದಿ 4 ಮತ್ತು 5 ಅವರು ಕೇಳಿರುತ್ತೇವೆ. ವಾದಿ ಕಡೆಯಿಂದ ಕೈಸಾಲ ಪಡೆದುಕೊಂಡಿರುತ್ತೆವೆಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿ ವಕೀಲರ ಮೂಲಕ ನೋಟಿಸ್ ನೀಡಿದ ಬಳಿಕ ನನ್ನ ತಾಯಿ ವಾದಿಯ ಬಳಿ ಹೋಗಿ ಕಾಲಾವಕಾಶ ಕೇಳಿರುತ್ತಾರೆ ಎಂದರೆ ಸರಿಯಲ್ಲ.

ಫೆಬ್ರವರಿ ಮತ್ತು ಜುಲೈ 2017 ಮತ್ತು ಫೆಬ್ರವರಿ ಮತ್ತು ಆಗಷ್ಟ 2018 ರಲ್ಲಿ ವಾದಿ ನಮಗೆ ಕ್ರಯ ಪತ್ರ ಬರೆದುಕೊಡುವಂತೆ ಹೇಳಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯಲ್ಲಿ ಆದಾರ ತಿರುವಳಿಯ ಬಗ್ಗೆ ನಕಲನ್ನು ತೋರಿಸಿ ಸದರಿ ದಾಖಲೆ ಪ್ರಕಾರ ಕವಿತಾ ಅವರು ಪ್ರತಿವಾದಿ 1 ಅವರಿಗೆ ಆದಾರ ತಿರುವಳಿ ಪತ್ರ ಬರೆದುಕೊಟ್ಟಿರುವುದಾಗಿ ಕೇಳಲಾಗಿ ಸಾಕ್ಷಿ ಒಪ್ಪಿಕೊಂಡಿದ್ದು **ಅದನ್ನು ನಿ.ಪಿ 17 ಎಂದು ಗುರುತಿಸಲಾಯಿತು.** ಆದಾರ ತಿರುವಳಿ ಪತ್ರ ಮಾಡಿ ಕೊಟ್ಟ ನಂತರ ವಾದಿ ಕರಾರು ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನೂಂದಣಾಧಿಕಾರಿ ಮೌಲ್ಯ ಮಾಪನದಂತೆ ಪ್ರಸ್ತುತ ಮಾರುಕಟ್ಟೆಯ ಮೇಲೆ 1 ಎಕರೆಗೆ - 1 ಲಕ್ಷ 64 ಸಾವಿರ ಇರುತ್ತದೆ ಎಂದು ಇರುವ ಮೌಲ್ಯ ಮಾಪನವನ್ನು ತೋರಿಸಿ ಕೇಳಲಾಗಿ ಸಾಕ್ಷಿ ಒಪ್ಪಿಕೊಂಡಿದ್ದು ಸದರಿ **ದಾಖಲೆಯನ್ನು ನಿ.ಪಿ 18 ಎಂದು ಗುರುತಿಸಲಾಯಿತು**. ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ 2016 ರಲ್ಲಿ ಈ ಮೇಲೆ ಹೇಳಿದಂತೆ ಇದ್ದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾವು ಕ್ರಯ ಪತ್ರ ಬರೆದುಕೊಡದೇ ಇರುವ ಕಾರಣ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮರುತ್ತರ ನೀಡಿರುವುದು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.